## ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/1962/2020/ಎಆರ್‌ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 20/10/2022.

### *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ*

ವಿಷಯ: ಶ್ರೀ. ಈರಣ್ಣ ಗೌಡ ಕಾರಕಳ್ಳಿ, ಪ್ರಥಮ ದರ್ಜೆ ಸಹಾಯಕರು, ನಿಯೋಜನೆ ಮೇರೆಗೆ ಕರ್ನಾಟಕ ರಾಜ್ಯ ಪಾನೀಯ ನಿಗಮ, ಕಲಬುರಗಿ (ಪ್ರಸ್ತುತ ಅಬಕಾರಿ ಅಧೀಕ್ಷಕರು, ಕರ್ನಾಟಕ ರಾಜ್ಯ ಪಾನೀಯ ನಿಗಮ, ಕಲಬುರಗಿ ರವರ ದುರ್ನಡತೆ/ಕರ್ತವ್ಯ ಲೋಪದ ಕುರಿತು.

****

ಎದುರುದಾರರಾದ ಶ್ರೀ. ಈರಣ್ಣ ಗೌಡ ಕಾರಕಳ್ಳಿ ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ರಾಜ್ಯ ಪಾನೀಯ ನಿಗಮ, ಕಲಬುರಗಿ ಜಿಲ್ಲೆ ಇವರ ವಿರುದ್ಧ ಗೌರವಾನ್ವಿತ ಉಪಲೋಕಾಯುಕ್ತರು-1 ಇವರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದು, ಸದರಿ ದೂರಿನಲ್ಲಿ ಎದುರುದಾರರು ದಿ. 20/07/1993ರಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಉಪ ಆಯುಕ್ತರು, ಅಬಕಾರಿ ಮತ್ತು ಅಬಕಾರಿ ಅಧೀಕ್ಷಕರ ಕಛೇರಿಯಲ್ಲಿ ನೇಮಕಾತಿ ಹೊಂದಿದ್ದು, ನಂತರ ಪದೋನ್ನತಿ ಹೊಂದಿ ನಿಯೋಜನೆ ಮೇಲೆ ಕರ್ನಾಟಕ ರಾಜ್ಯ ಪಾನೀಯ ನಿಗಮ, ಕಲಬುರಗಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರು ದಿನಾಂಕ: 20/07/1993 ರಿಂದ ದಿನಾಂಕ: 19/03/2010ರ ಅವಧಿಯಲ್ಲಿ ಬಲ್ಲ ಆದಾಯಕ್ಕಿಂತ 106.97% ಹೆಚ್ಚಿನ ಆದಾಯ ಹೊಂದಿರುವುದು ಕಂಡುಬಂದಿದ್ದು ಈ ಸಂಬಂಧ ಎದುರುದಾರರ ವಿರುದ್ಧ ಭ್ರಷ್ಟಾಚಾರ ಕಾಯ್ದೆ 1988ರ ಕಲಂ. 13(1)(ಇ) ರೆ:ವಿ 13(2)ರ ಪ್ರಕರಣ ಸಂಖ್ಯೆ: 6/2016 ದಾಖಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರಣೆ:-

ತನಿಖಾಧಿಕಾರಿಯವರು ಸಲ್ಲಿಸಿರುವ ವರದಿಯ ಪ್ರಕಾರ ಬಲ್ಲ ಮೂಲಗಳಿಗಿಂತ ಹೆಚ್ಚಿನ ಆದಾಯ ಅಂದರೆ ಪರಿವೀಕ್ಷಣಾ ಟಿಪ್ಪಣಿಯ ಕ್ರಮ ಸಂಖ್ಯೆ: 6, 7, 8, 9ರಲ್ಲಿನ ಸ್ಥಿರಾಸ್ತಿ, ಕ್ರಮ ಸಂಖ್ಯೆ-11, 12, 13, 14, 15, 16, 17, 18, 19, 20, 21 ರಲ್ಲಿನ ಚರಾಸ್ತಿ, ಕ್ರಮ ಸಂಖ್ಯೆ: 22, 23ರಲ್ಲಿನ ಚಿನ್ನ ಮತ್ತು ಬೆಳ್ಳಿ ಒಡವೆ, ಕ್ರಮ ಸಂಖ್ಯೆ: 25, 26, 27ರಲ್ಲಿ ಸಾಲ ಪಡೆದಿರುವುದು, ಕ್ರಮ ಸಂಖ್ಯೆ: 32ರಲ್ಲಿ ವಾಹನಗಳ ಖರೀದಿ, ಕ್ರಮ ಸಂಖ್ಯೆ: 31ರಲ್ಲಿ ಮನೆಯನ್ನು ಅಡವಿಟ್ಟಿರುವ ಕುರಿತು ಮತ್ತು ಕ್ರಮ ಸಂಖ್ಯೆ: 32ರಲ್ಲಿ ವಾಹನಗಳ ಖರೀದಿಗೆ ಸಂಬಂಧಿಸಿದಂತೆ ಎದುರುದಾರ ಮತ್ತು ಅವರ ಕುಟುಂಬದ ಸದಸ್ಯರು ಹಾಗೂ ಎದುರುದಾರರ ಸಹೋದರರ ಹೆಸರಿನಲ್ಲಿ ಖರೀದಿಸಿರುವುದು/ಪಡೆದಿರುವುದು ಕಂಡುಬಂದಿದ್ದು, ಸದರಿ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ಇರುವುದು ಮತ್ತು ನಿಯಮ 21 ಮತ್ತು 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರನ್ನು ಉಲ್ಲಂಘಿಸಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಪರಿವೀಕ್ಷಣಾ ಟಿಪ್ಪಣಿಯನ್ನು ತಯಾರಿಸಿ ಎದುರುದಾರರಿಗೆ ಕಳುಹಿಸಿ ಪರಿವೀಕ್ಷಣಾ ಟಿಪ್ಪಣಿಗೆ ಆಕ್ಷೇಪಣೆ ಸಲ್ಲಿಸಲು ತಿಳಿಸಲಾಗಿತ್ತು.

3. ಎದುರುದಾರರು ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರು ಮತ್ತು ಸಹೋದರ ಇವರ ಹೆಸರಿನಲ್ಲಿ ಬ್ಯಾಂಕುಗಳಿಂದ ಸಾಲವನ್ನು ಪಡೆಯುವ ಮೊದಲು ಸಕ್ಷಮ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ ಹಾಗೂ ನಂತರದಲ್ಲಿ ಸಹ ಸಕ್ಷಮ ಪ್ರಾಧಿಕಾರಕ್ಕೆ ಯಾವುದೇ ಮಾಹಿತಿಯನ್ನು ಸಲ್ಲಿಸಿರುವುದಿಲ್ಲವೆಂಬ ಅಂಶವು ತನಿಖೆಯಿಂದ ಕಂಡುಬಂದಿರುತ್ತದೆ.

4. ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ಇರುವ ಬಗ್ಗೆ ಹಾಗೂ ಖರೀದಿ ನಂತರದಲ್ಲಿ ಮಾಹಿತಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೇ ಇರುವ ಅಂಶಕ್ಕೆ ಆಕ್ಷೇಪಣೆಯನ್ನು ಸಲ್ಲಿಸಲು ತಿಳಿಸಲಾಗಿತ್ತು.

5. ಎದುರುದಾರರು ದಿನಾಂಕ: 09/04/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಆಕ್ಷೇಪಣೆ ಮತ್ತು ಸೇವಾ ವಿವರಗಳ ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಎದುರುದಾರರು ಪರಿಶೀಲನಾ ಟಿಪ್ಪಣಿಯ ಕ್ರಮ ಸಂಖ್ಯೆ: 6ಕ್ಕೆ ಸಂಬಂಧಿಸಿದಂತೆ, ಎದುರುದಾರರ ಹೆಂಡತಿಯಾದ ಶ್ರೀಮತಿ. ವಿಜಯಲಕ್ಷ್ಮಿ ಇವರ ಹೆಸರಿನಲ್ಲಿ ರೂ. 41,00,000/- ಮೌಲ್ಯದ ಮನೆಯನ್ನು ಖರೀದಿಸಿರುವುದಾಗಿ ಇಂಜಿನಿಯರ್ ಇವರು ರೂ. 9,95,000/- ಗಳಿಗೆ ಮೌಲ್ಯಮಾಪನ ಮಾಡಿರುವುದಾಗಿ, ವ್ಯತ್ಯಾಸದ ಹಣ ರೂ. 5,54,000/-ಗಳನ್ನು ಕಟಾಯಿಸಲಾಗಿರುತ್ತದೆ ಎಂದು, ಹೆಂಡತಿಯ ತಾಯಿ ಶ್ರೀಮತಿ. ಲಕ್ಷ್ಮಿದೇವಿ ಇವರು ರೂ. 1,50,000/- ಹಣ ಉಡುಗೊರೆಯಾಗಿ ನೀಡಿರುವುದಾಗಿ, ಹೆಂಡತಿಯ ಅಣ್ಣ ಅರುಣ್‌ಕುಮಾರ್ ಇವರು ರೂ. 1-00 ಲಕ್ಷ ಉಡುಗೊರೆಯಾಗಿ ನೀಡಿರುವುದಾಗಿ, ಹೆಂಡತಿಯ ಅಕ್ಕ ಶ್ರೀಮತಿ. ಸರೋಜಾ ಕೋಂ. ಸುಭಾಷ್ ಗುತ್ತೇದಾರ ಇವರು ರೂ. 1-00 ಲಕ್ಷ ಹಾಗೂ ಉಳಿದ ಹಣವನ್ನು ಹೆಂಡತಿಯ ಉಳಿತಾಯದಿಂದ ಖರೀದಿಸಿದ್ದು, ಖರೀದಿ ಮಾಡಿದ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ದಿನಾಂಕ: 18/12/2003ರಲ್ಲಿ ಲಿಖಿತ ರೂಪದಲ್ಲಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಕ್ರಮ ಸಂಖ್ಯೆ: (7)(8) ಮತ್ತು (9)ರಲ್ಲಿ ಎದುರುದಾರರ ಸಹೋದರ ಶ್ರೀ. ಸಂತೋಷ್ ಇವರು ಖರೀದಿಸಿರುವ ಆಸ್ತಿಗೂ ಎದುರುದಾರರಿಗೆ ಸಂಬಂಧವಿರುವುದಿಲ್ಲವೆಂದು, ಸಂತೋಷ್ ಇವರು ಸ್ಥಿರಾಸ್ತಿಯನ್ನು ಖರೀದಿಸಲು ಇದ್ದ ಆದಾಯ ಮೂಲದ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ಕೊಟ್ಟಂತಹ ಮಾಹಿತಿಯನ್ನು ಘನ ನ್ಯಾಯಾಲಯವು ಪುರಸ್ಕರಿಸಿರುತ್ತದೆ ಎಂದು ತಿಳಿಸಿರುತ್ತಾರೆ. ಕ್ರಮ ಸಂಖ್ಯೆ: (11) ರಿಂದ (14)ರವರೆಗಿನ ದ್ವಿಚಕ್ರ ವಾಹನಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನಿಂದ ಸಾಲವನ್ನು ಪಡೆಯುವ ಮೊದಲು ಸಕ್ಷಮ

ಪ್ರಾಧಿಕಾರದಿಂದ ಸಾಲವನ್ನು ಪಡೆದು ಕಾರನ್ನು ಖರೀದಿಸಿರುವುದಾಗಿ ಮತ್ತು ದ್ವಿಚಕ್ರ ವಾಹನ ಮತ್ತು ಕಾರನ್ನು ಖರೀದಿಸಿದ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ಆಯಾ ವರ್ಷದಲ್ಲಿ ಸಲ್ಲಿಸಿರುವ ಸ್ಥಿರಾಸ್ತಿ ಮತ್ತು ಚರಾಸ್ತಿ ಪಟ್ಟಿಯಲ್ಲಿ ಘೋಷಿಸಿರುವುದಾಗಿ ತಿಳಿಸಿರುತ್ತಾರೆ. ಕ್ರಮ ಸಂಖ್ಯೆ: (15) ರಿಂದ (18), 29, 30 ಮತ್ತು 31ರ ದ್ವಿಚಕ್ರ ವಾಹನಗಳನ್ನು ಎದುರುದಾರರ ಸಹೋದರರು ಖರೀದಿಸಿದ್ದು, ಕಾರುಗಳ ಖರೀದಿ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಕ್ರಮ ಸಂಖ್ಯೆ: (19) ರಿಂದ (21) ರವರೆಗಿನ ವಾಹನಗಳ ಖರೀದಿಗೆ ಸಂಬಂಧಿಸಿದಂತೆ ಘನ ನ್ಯಾಯಾಲಯದಲ್ಲಿ 2006, 2009 ಮತ್ತು 2010ನೇ ಸಾಲಿನಲ್ಲಿ ಇಲಾಖೆಗೆ ಸಲ್ಲಿಸಿರುವ ಸ್ಥಿರಾಸ್ತಿ ಮತ್ತು ಚರಾಸ್ತಿಯಲ್ಲಿ ನಮೂದು ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಮಾಹಿತಿಯನ್ನು ನ್ಯಾಯಾಲಯವು ಅಂಗೀಕರಿಸಿರುವುದಾಗಿ ತಿಳಿಸಿರುತ್ತಾರೆ. ಕ್ರಮ ಸಂಖ್ಯೆ.(22) ಮತ್ತು (23)ರಲ್ಲಿನ ಚಿನ್ನ, ಬೆಳ್ಳಿ ಮತ್ತು ಇತರೆ ಒಡವೆಗಳ ಖರೀದಿ ಸಂಬಂಧ ಇಲಾಖೆಯಿಂದ ಪೂರ್ವಾನುಮತಿ ಪಡೆದಿರುವುದಿಲ್ಲ ಎಂಬುದಕ್ಕೆ ಸಂಬಂಧಿಸಿದಂತೆ ಈಗಾಗಲೇ ಘನ ನ್ಯಾಯಾಲಯದಲ್ಲಿ ಮಾಹಿತಿ ಸಲ್ಲಿಸಿದ್ದು ನ್ಯಾಯಾಲಯವು ಅಂಗೀಕರಿಸಿರುವುದಾಗಿ ತಿಳಿಸಿರುತ್ತಾರೆ.

6. ಕ್ರಮ ಸಂಖ್ಯೆ. (25) ರಿಂದ (27)ರಲ್ಲಿ ಬ್ಯಾಂಕುಗಳಿಂದ ಸಾಲವನ್ನು ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಈಗಾಗಲೇ ಪೂರ್ವಾನುಮತಿಯನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಕ್ರಮ ಸಂಖ್ಯೆ. (28) ಮತ್ತು (32)ಕ್ಕೆ ಸಂಬಂಧಿಸಿದ ಬ್ಯಾಂಕಿನಿಂದ ಸಾಲ, ವಾಹನ ಖರೀದಿ ಇವುಗಳನ್ನು ಎದುರುದಾರರ ಹೆಂಡತಿಯವರು ಸ್ವಂತ ಆದಾಯದಿಂದ ಖರೀದಿಸಿದ್ದು ಕೆ.ಸಿ.ಎಸ್ (ನಡತೆ) ನಿಯಮ 23ರ ಪ್ರಕಾರ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯುವ ಅವಶ್ಯಕತೆಯಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈಗಾಗಲೇ ಎದುರುದಾರರು ಇಲಾಖೆಗೆ ಸಲ್ಲಿಸಿರುವ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾಹಿತಿಯನ್ನು ಘನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಘನ ನ್ಯಾಯಾಲಯವು ಅಂಗೀಕರಿಸಿ ಆರೋಪ ಮುಕ್ತನನ್ನಾಗಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಪ್ರತಿ ವರ್ಷ ಇಲಾಖೆಗೆ ಸಲ್ಲಿಸಲಾಗುವ

ಸ್ಥಿರಾಸ್ತಿ ಮತ್ತು ಚರಾಸ್ತಿ ಪಟ್ಟಿಯಲ್ಲಿ ನಮೂದಿಸಿರುವುದನ್ನು ಇಲಾಖೆಯ ಮೇಲಾಧಿಕಾರಿಗಳು ಯಾವುದೇ ಆಕ್ಷೇಪಣೆ/ತಕರಾರು ತೆಗೆಯದೇ ಒಪ್ಪಿಕೊಂಡಿರುವುದರಿಂದ ಎದುರುದಾರರು ಹೊಂದಿರುವ ಚರಾಸ್ತಿ ಮತ್ತು ಸ್ಥಿರಾಸ್ತಿಗಳು ಕಾನೂನುಬದ್ಧವಾಗಿವೆ ಎಂಬ ಅರ್ಥದಲ್ಲಿ ಬರುತ್ತದೆ ಎಂದು ತಿಳಿಸಿರುತ್ತಾರೆ.

7. ಎದುರುದಾರರ ವಿರುದ್ಧ ದಾಖಲಾದಂತಹ ಪ್ರಕರಣ ಸಂಖ್ಯೆ: 6/2016ರಲ್ಲಿ ತೀರ್ಪನ್ನು ದಿನಾಂಕ: 23/08/2017ರಂದು ಪ್ರಕಟಿಸಲಾಗಿದ್ದು ಸದರಿ ಪ್ರಕರಣದಲ್ಲಿ ಎದುರುದಾರರು ಬಲ್ಲ ಮೂಲಗಳಿಗಿಂತ ಹೆಚ್ಚಿನ ಆದಾಯ ಹೊಂದಿದ್ದಾರೆ ಎನ್ನುವ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಮಂಡನಾಧಿಕಾರಿಯವರು ವಿಫಲರಾಗಿದ್ದು ಎದುರುದಾರರನ್ನು ನಿರ್ದೋಷಿ ಎಂದು ಬಿಡುಗಡೆ ಮಾಡಲಾಗಿರುತ್ತದೆ ಎಂದು, ಸಹೋದರ ಸಂತೋಷ್ ಇವರು ಹೊಂದಿದ್ದ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಕೈಬಿಡಲು ಸೂಕ್ತ ಪುರಾವೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಕಾರಣದಿಂದ ಘನ ನ್ಯಾಯಾಲಯವು ಎದುರುದಾರರ ಸಹೋದರ ಹೊಂದಿದ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಕೈಬಿಟ್ಟಿರುವುದಾಗಿ ತಿಳಿಸಿರುತ್ತಾರೆ. ಎದುರುದಾರರು ಮತ್ತು ಎದುರುದಾರರ ಕುಟುಂಬದವರು ಖರೀದಿಸಿದ ವಾಹನಗಳು ಹಾಗೂ ಬ್ಯಾಂಕ್‌ಗಳಿಂದ ಪಡೆದಂತಹ ಸಾಲಕ್ಕೆ ಇಲಾಖೆಗೆ ಸಲ್ಲಿಸಿರುವ ಸ್ಥಿರಾಸ್ತಿ ಮತ್ತು ಚರಾಸ್ತಿ ಪಟ್ಟಿಯಲ್ಲಿ ನಮೂದು ಮಾಡಿರುವುದನ್ನು ಘನ ನ್ಯಾಯಾಲಯವು ಒಪ್ಪಿ ಆರೋಪ ಮುಕ್ತನನ್ನಾಗಿ ಮಾಡಿರುವುದರಿಂದ ಎದುರುದಾರರು ಖರೀದಿಸಿರುವ ಸ್ಥಿರಾಸ್ತಿ ಮತ್ತು ಚರಾಸ್ತಿಗಳು ನಿಯಮಾನುಸಾರ ಇರುವುದಾಗಿ ತಿಳಿಸಿರುತ್ತಾರೆ. ಪರಿವೀಕ್ಷಣಾ ಟಿಪ್ಪಣಿಯಲ್ಲಿ ದುರ್ನಡತೆ ಎಸಗಿರುವುದಾಗಿ ಆಪಾದಿಸಿರುವ ಅಂಶವು ಸತ್ಯಕ್ಕೆ ದೂರವಾಗಿರುತ್ತದೆ ಎಂದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ. 8(2)ರಡಿಯಲ್ಲಿ ಘಟನೆ ನಡೆದು ಐದು ವರ್ಷಗಳ ಬಳಿಕ ಕ್ರಮ ಜರುಗಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿದ್ದು ಎದುರುದಾರರು ವಿರುದ್ಧ 2010ರಲ್ಲಿ ನಡೆದಿರುವ ದಾಳಿಗೆ 2020ರಲ್ಲಿ ಪರಿವೀಕ್ಷಣಾ ಟಿಪ್ಪಣಿ ಜಾರಿ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಅರ್ಜಿ ಸಂಖ್ಯೆ: 1113/2012ರಲ್ಲಿ

ಜನಾರ್ಧನ ವಿರುದ್ಧ ಕರ್ನಾಟಕ ಲೋಕಾಯುಕ್ತ ಮತ್ತು ಇತರರ ಪ್ರಕರಣದಲ್ಲಿ ಐದು ವರ್ಷಗಳ ಅವಧಿಯ ನಂತರದಲ್ಲಿ ಪ್ರಾರಂಭಿಸಿದ ಶಿಸ್ತು ವಿಚಾರಣೆಯನ್ನು ರದ್ದುಗೊಳಿಸಿವುದಾಗಿ 10 ವರ್ಷಗಳ ಬಳಿಕ ಯಾವುದೇ ಶಿಸ್ತು ಕ್ರಮವನ್ನು ಜರುಗಿಸಬಾರದೆಂದು P.V. MAHADEVAN Vs. T.N. HOUSING BOARD (2005) {6} SCC 636 ಸರ್ವೋಚ್ಛ ನ್ಯಾಯಾಲಯವು ಮತ್ತು ವಿಳಂಬ ನೀತಿಯನ್ನು ಅನುಸರಿಸಿ ಶಿಸ್ತು ಕ್ರಮ ಜರುಗಿಸಬಾರದೆಂದು STATE OF AP Vs. N. RADHAKRISHNA (1998) (4) SCC 154ರಲ್ಲಿ ಸರ್ವೋಚ್ಛ ನ್ಯಾಯಾಲಯವು ತಿಳಿಸಿದ್ದು ಎಲ್ಲಾ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿಗುತ್ತಾರೆ.

8. ತನಿಖಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿ ಹಾಗೂ ತನಿಖಾ ವರದಿಯಲ್ಲಿನ ಅಂಶಗಳಿಗೆ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿನ ಮಾಹಿತಿಗಳನ್ನು ಪರಿಗಣನೆಗೆ ತೆಗೆದುಕೊಂಡಾಗ ಎದುರುದಾರರು ಬಲ್ಲ ಆದಾಯಕ್ಕಿಂತ ಹೆಚ್ಚಿನ ಆದಾಯವನ್ನು ಹೊಂದಿರುವುದು ಸಾಬೀತಾಗಿರುತ್ತದೆ ಹಾಗೂ ಎದುರುದಾರರು ಸ್ಥಿರಾಸ್ತಿ, ಚರಾಸ್ತಿ ಮತ್ತು ಬ್ಯಾಂಕುಗಳಿಂದ ಸಾಲವನ್ನು ಪಡೆದುಕೊಂಡ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ಹಾಗೂ ನಂತರದಲ್ಲಿ ಘಟನೋತ್ತರ ಅನುಮತಿಯನ್ನು ಪಡೆಯದೇ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966ರ ನಿಯಮ 21(4), 23(2) ಮತ್ತು 23(3)ರ ಉಲ್ಲಂಘನೆ ಮಾಡಿರುವುದು ಸಾಬೀತಾಗಿರುತ್ತದೆ.

9. ಆದುದರಿಂದ, ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು,

1966ರ, ನಿಯಮ 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ಮಾಡಲು "ಉಪಲೋಕಾಯುಕ್ತರವರಿಗೆ" ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

29/11/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.